**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 04.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು land scape irrigation ವ್ಯವಹಾರ ಮಾಡುತ್ತೇನೆ. ಪ್ರತಿವಾದಿ ನಂ.1 ಇವರಿಗೆ 40 ಲಕ್ಷ ನೀಡಿರುವ ಬಗ್ಗೆ ನನ್ನ ಆದಾಯ ತೆರಿಗೆ ದಾಖಲೆಗಳಲ್ಲಿ ನಮೂದಿಸಿರುತ್ತೇನೆ. ನನ್ನ ಆದಾಯ ತೆರಿಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಸಾಕ್ಷಿ ಈಗ ಅವರ ಪರವಾಗಿ ಹಾಜರಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಅದರಲ್ಲಿ ಆದಾಯ ತೆರಿಗೆ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು 7-8 ವರ್ಷಗಳಿಂದ ವ್ಯವಹಾರ ಮಾಡುತ್ತಿದ್ದೇನೆ. 2004 ರಲ್ಲಿ ನಾನು ಎಂಬಿಎ ಪದವಿ ಪಡೆದುಕೊಂಡಿರುತ್ತೇನೆ. ನಾನು ಮೂಲತಃ ಬಳ್ಳಾರಿ ಜಿಲ್ಲೆಯ ಕಮಲಾಪುರ ಗ್ರಾಮದವನಾಗಿರುತ್ತೇನೆ ಹುಬ್ಬಳ್ಳಿಗೆ ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾತ್ರ ನೀವು ಬಂದಿರುತ್ತಿರಿ ಎಂದರೆ ಸಾಕ್ಷಿ ನಾನು ಹುಬ್ಬಳ್ಳಿಗೆ ಬರುತ್ತ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಜಮೀನು ನೋಡಲು ಹೋದಾಗ ಪ್ರತಿವಾದಿ ನಂ.1 ಅಲ್ಲಿಯೇ ಇದ್ದರು ಹಾಗೂ ಅವರ ಮಗನ ಮೂಲಕ ಪ್ರತಿವಾದಿ ನಂ.1 ನನಗೆ ಪರಿಚಯವಾದರು. ಅಕ್ಟೋಬರ್ ನವೆಂಬರ್ 2022 ರಲ್ಲಿ ನಾನು ದಾವಾ ಆಸ್ತಿಯನ್ನು ನೋಡಲು ಹೋಗಿದ್ದೇನು. ದಾವಾ ಆಸ್ತಿಯಲ್ಲಿ ಪ್ರತಿವಾದಿ ನಂ.1 ಇವರಿಗೆ ಏನು ಹಕ್ಕು ಇದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ ಪ್ರತಿವಾದಿ ನಂ.1 ಇವರ ಗಂಡನಾದ ಸಿದ್ದಲಿಂಗಪ್ಪ ಮೆಣಸಿನಕಾಯಿ ಇವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸಿದ್ದಲಿಂಗಪ್ಪ ಮೆಣಸಿನಕಾಯಿ ಇವರು ತೀರಿಕೊಂಡ ನಂತರ ಪ್ರತಿವಾದಿ ನಂ.1 ಹಾಗೂ ಅವರ ಮಕ್ಕಳ ಹೆಸರು ದಾವಾ ಆಸ್ತಿಯ ದಾಖಲೆಯಲ್ಲಿ ವಾರಸಾ ನಾತೆಯಿಂದ ದಾಖಲಾಗಿರುತ್ತದೆ ಅದನ್ನು ನೋಡಿದ್ದಿರಾ ಎಂದರೆ ಸಾಕ್ಷಿ ನಾನು ಪ್ರತಿವಾದಿ ನಂ.1 ಇವರ ಹೆಸರು ಇರುವುದನ್ನು ಮಾತ್ರ ನೋಡಿರುತ್ತೇನೆಂದು ನುಡಿಯುತ್ತಾರೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿಯಾದ ಕಾರಣ ಸಿದ್ದಲಿಂಗಪ್ಪ ಮೆಣಸಿನಕಾಯಿ ಇವರ ಮಕ್ಕಳಿಗೂ ಸಹ ಅದರಲ್ಲಿ ಹಿಸ್ಸೆ ಇದೆ ಎಂದರೆ ಸರಿ. ದಿಃ 15/12/2022 ರಂದು ತಲಾ 10 ಲಕ್ಷದ ನಾಲ್ಕು ಚೆಕ್‌ಗಳನ್ನು ಪ್ರತಿವಾದಿ ನಂ.1 ಇವರ ಹೆಸರಿಗೆ ನೀಡಿರುತ್ತೇನೆ. ಪ್ರಸ್ತುತ ವ್ಯವಹಾರ ನನ್ನ ಹಾಗೂ ಪ್ರತಿವಾದಿ ನಂ.1 ಇವರ ಮಧ್ಯ ವೈಯ್ಯುಕ್ತಿಕವಾಗಿ ನಡೆದಿದೆ. 15/12/2022 ರಂದು ಪ್ರತಿವಾದಿ ನಂ.1 ಇವರಿಗೆ 40

ಲಕ್ಷಗಳನ್ನು ಚೆಕ್ ಮೂಲಕ ನೀಡುವ ಸಮಯದಲ್ಲಿ ಅವರ ಕಡೆಯಿಂದ ಭದ್ರತೆಗಾಗಿ ಚೆಕ್ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ನಾನು ಚೆಕ್ ಮೂಲಕ ಹಣ ನೀಡಿರುವ ಕಾರಣ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

ನಿಪಿ.1 ಖರೀದಿ ಕರಾರುಪತ್ರವನ್ನು ದಸ್ತಾವೇಜು ಬರಹಗಾರರು ತಯಾರಿಸಿರುತ್ತಾರೆ. ಅದನ್ನು ತಯಾರಿಸಲು ಪ್ರತಿವಾದಿ ನಂ.1 ಹಾಗೂ ಅವರ ಮಗ ಮಾಹಿತಿ ನೀಡಿರುತ್ತಾರೆ. ಸದರಿ ದಾಖಲೆಯನ್ನು ನೊಂದಣಿಯಾಗುವ ಒಂದು ದಿನ ಪೂರ್ವದಲ್ಲಿ ಅಂದರೆ ಬಹುತೇಕ ದಿನಾಂಕ 10/12/2022 ರಂದು ತಯಾರಿಸಿರಬಹುದು. ನಿಪಿ.1 ದಾಖಲೆ ತಯಾರಿಸುವ ಸಮಯದಲ್ಲಿ ನಾನು, ದಸ್ತಾವೇಜು ಬರಹಗಾರರು ಹಾಗೂ ಪ್ರತಿವಾದಿ ನಂ.1 ಇವರ ಮಕ್ಕಳಾದ ಶಿವಾನಂದ ಮತ್ತು ಮಲ್ಲಿಕಾರ್ಜುನ ಎಂಬುವವರು ಇದ್ದರು. ಅದರಲ್ಲಿ ತೋರಿಸಿರುವ ಸಾಕ್ಷಿದಾರರು ದಾಖಲೆಯನ್ನು ತಯಾರಿಸಿದ ನಂತರ ಬಂದಿದ್ದರು ಹಾಗೂ ಅವರು ನನ್ನ ಕಡೆಯ ಸಾಕ್ಷಿದಾರರಾಗಿದ್ದರು. ನಿಪಿ.1 ರಲ್ಲಿ ಪ್ರಕಾಶ ಎಂದು ತೋರಿಸಲಾದ ಸಾಕ್ಷಿದಾರರ ಪೂರ್ತಿ ಹೆಸರು ಹಾಗೂ ವಿಳಾಸ ನನಗೆ ಗೊತ್ತಿಲ್ಲ. ಸದರಿ ಪ್ರಕಾಶ ಇವರು ರಿಯಲ್ ಎಸ್ಟೇಟ್ ಏಜೆಂಟ್ ಆಗಿರುತ್ತಾರೆ. ದಿಃ15/12/2022 ರಂದು 40 ಲಕ್ಷವನ್ನು ನೀಡುವಾಗ ಪ್ರಕಾಶ ಇವರು ಸಮಕ್ಷಮ ಸದರಿ ಮೊತ್ತಕ್ಕೆ ಪ್ರತಿತಿಂಗಳು ಶೇ.1.5 ರಷ್ಟು ಬಡ್ಡಿ ಕೊಡಬೇಕು ಎಂದು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಆ ಪ್ರಕಾರ ಪ್ರತಿವಾದಿ ನಂ.1 ದಿಃ 15/12/2022 ರಿಂದ ನಿಪಿ.3 ನೋಟೀಸ್ ನೀಡುವವರೆಗೂ ಪ್ರತಿತಿಂಗಳು 40 ಲಕ್ಷದ ಮೇಲೆ 1,05,000/- ರೂ. ಗಳಂತೆ ಒಟ್ಟು 11,55,000/-ಬಡ್ಡಿಯನ್ನು ಸದರಿ ಪ್ರಕಾಶ ಮುಖಾಂತರ ಪ್ರತಿವಾದಿ ನಂ.1 ಇವರ ಮಗ ಮಲ್ಲಿಕಾರ್ಜುನ ನನಗೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಂತರ ಪ್ರತಿವಾದಿ ಬಡ್ಡಿ ಕೊಡಲು ವಿಫಲನಾದ ಕಾರಣ ನಾನು ಅವರ ವಿರುದ್ಧ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಪ್ರತಿವಾದಪತ್ರ ಸಲ್ಲಿಸಿದ ನಂತರ ಪ್ರಸ್ತುತ ದಾವೆ ರಾಜೀ ಸಂಧನಾಕ್ಕೆಂದು ದಿನಾಂಕ ನಿಗದಿಪಡಿಸಲಾಗಿತ್ತು ಎಂದರೆ ಸರಿ. ದೀ 10/12/2022 ರಂದು ನ್ಯಾಯಾಲಯದ ಮುದ್ದತ್ತು ಮುಗಿದ ನಂತರ ಪ್ರತಿವಾದಿ ನಂ.1 ಇವರ ಮಗ ಮಲ್ಲಿಕಾರ್ಜುನ ಈತನು 2 ಲಕ್ಷ ರೂ. ಗಳನ್ನು ಬ್ಯಾಂಕಿನಿಂದ ವಿತ್ ಡ್ರಾ ಮಾಡಿ ನನಗೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಅದಾದ ನಂತರ ದಿಃ 02/04/2026 ರಂದು ಮಲ್ಲಿಕಾರ್ಜುನ ಈತನು ನಮ್ಮ ವಕೀಲರ ಕಚೇರಿಯಲ್ಲಿ ಪ್ರಕಾಶ ಇವರ ಸಮಕ್ಷಮ ನನಗೆ 10 ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಾನು ಪ್ರತಿವಾದಿ ನಂ.1 ಇವರಿಗೆ 40 ಲಕ್ಷ ಸಾಲ ನೀಡಿ ಅದರ ಭದ್ರತೆಗಾಗಿ ಅವರ ಕಡೆಯಿಂದ ನಿಪಿ.1 ದಾಖಲೆ ಮಾಡಿಸಿಕೊಂಡಿರುತ್ತೇನೆ ಹೊರತು ಅದು ಖರೀದಿ ಕರಾರುಪತ್ರ ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರು

ನನಗೆ ಅವರು ಪಡೆದ 40 ಲಕ್ಷ ರೂ.ಗಳ ಬಾಬತ್ತು ಪ್ರತಿತಿಂಗಳು ಬಡ್ಡಿ ಕೊಡುತ್ತ ಬಂದ ಕಾರಣ ಈ ದಾವೆಯಲ್ಲಿ ಕಾಣಿಸಿದ ಶೇ.24 ರಷ್ಟು ಬಡ್ಡಿ ಪಡೆಯಲು ನಾನು ಅರ್ಹನಲ್ಲ ಹಾಗೂ ಅದನ್ನು ಕೊಡಲು ಅವರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಇವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದು ಗೊತ್ತಿದ್ದರೂ ಸಹ ಅವರಿಗೆ ಒತ್ತಾಯ ಬೀರಿ ಅವರ ಕಡೆಯಿಂದ ನಿಪಿ.1 ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ತಾವು ಈಗಾಗಲೇ ನನಗೆ ಕೊಟ್ಟ ಮೊತ್ತವನ್ನು 40 ಲಕೆಗಳಲ್ಲಿ ವಜಾಗೊಳಿಸಿ ಉಳಿದ ಮೊತ್ತ್ವನ್ನು ಕೊಡಲು ಸಿದ್ಧರಿದ್ದಾರೆ ಎಂದರೆ ಸಾಕ್ಷಿ ಅವರು ನನಗೆ ಹಣ ಕೊಟ್ಟೇ ಇಲ್ಲ ಎಂದು ನುಡಿಯುತ್ತಾರೆ. ನಾನು ಪಡೆದ ಹಣದ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇರಬಾರದು ಎಂಬ ಕಾರಣಕ್ಕೆ ಅದನ್ನು ನಗದು ರೂಪದಲ್ಲಿ ಪಡೆದು ಈಗ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯ ವ್ಯವಹಾರ ಬಡ್ಡಿ ವ್ಯವಹಾರ ಆದ ಕಾರಣ ಪ್ರತಿವಾದಿ ನಂ.1 ನನಗೆ ದಾವಾ ಆಸ್ತಿಯ ವಿಷಯವಾಗಿ ಖರೀದಿ ಪತ್ರ ಮಾಡಿಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. Difference amount ನ್ನು ನಿಮಗೆ ಪ್ರತಿವಾದಿ ನಂ.1 ಇವತ್ತಿಗೂ ಸಹ ಕೊಡಲು ಸಿದ್ದರಿದ್ದಾರೆ ಎಂದರೆ ಸಾಕ್ಷಿ ಅದರ ಪ್ರಮೆಯ ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ ನಂ.1 ಇವರ ಕಡೆಯಿಂದ ಬಡ್ಡಿ ಪಡೆದು ಅವರನ್ನು ಹೆದರಿಸುವ ಉದ್ದೇಶದಿಂದ ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**